2008–09	ರೂ.1,43,79,076–00
2009–10	ರೂ.1,09,51,907–00
ಒಟ್ಟು	**ರೂ.2,53,30,983–00**

605 ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ವಿವಿಧ ಹಂತದ ಹುದ್ದೆಗಳ ಸಂಖ್ಯೆ ಎಷ್ಟು; (ಹುದ್ದೆಗಳ ಹೆಸರು ಸಮೇತ ಇಲಾಖಾವಾರು ಜಿಲ್ಲಾವಾರು ವಿವರ ಒದಗಿಸುವುದು);

ಆ) ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ. ಈ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಖಾಲಿ ಇರುವ ಹುದ್ದೆಗಳಿಂದಾಗಿ ಸರ್ಕಾರದ ಎಲ್ಲ ಜಿಲ್ಲಾಡಳಿತಗಳಲ್ಲಿ ಕೆಲಸ ಕಾರ್ಯಗಳು ಕುಂಠಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :

ಅ) 1,57,000 ಹುದ್ದೆಗಳು ಖಾಲಿ ಇರುತ್ತವೆ. ಇಲಾಖಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹುದ್ದೆಗಳು ವಿವಿಧ ಅವಧಿಯಿಂದ ಖಾಲಿಯಿವೆ. ಹಾಲಿ ಜಾರಿಯಲ್ಲಿರುವ ಮಿತವ್ಯಯ ಆದೇಶಗಳನ್ನು ಗಮನದಲ್ಲಿರಿಸಿಕೊಂಡು ಸಾಧ್ಯವಾದಷ್ಟು ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಇ) ಖಾಲಿ ಹುದ್ದೆಗಳಿಂದಾಗಿಯೇ ಕೆಲಸ ಕಾರ್ಯಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಪ್ರಭಾರ ವ್ಯವಸ್ಥೆಯನ್ನು ಮಾಡಿ ಖಾಲಿ ಹುದ್ದೆಗಳ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುವಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ವಾಣಿಜ್ಯ ತೆರಿಗೆ	3294
2	ಕಂದಾಯ	3046
3	ನೋಂದಣಿ ಮತ್ತು ಮುದ್ರಾಂಕ ಇಲಾಖೆ	240
4	ಅಬಕಾರಿ	2487
5	ಸಾರಿಗೆ ಇಲಾಖೆ	488
6	ಕರ್ನಾಟಕ ಸರ್ಕಾರದ ಸಚಿವಾಲಯ	565
7	ಖಜಾನೆ ಮತ್ತು ರಾಜ್ಯಪತ್ರ ಇಲಾಖೆ	597
8	ಪೊಲೀಸ್ ಇಲಾಖೆ	15491
9	ಬಂದಿಖಾನೆ ಇಲಾಖೆ	683
10	ಸರ್ಕಾರಿ ಮುದ್ರಣಾಲಯ	905
11	ಲೋಕೋಪಯೋಗಿ ಇಲಾಖೆ	1999
12	ಶಿಕ್ಷಣ ಇಲಾಖೆ	42499
13	ತಾಂತ್ರಿಕ ಶಿಕ್ಷಣ ಇಲಾಖೆ	4384
14	ಯುವಜನ ಸೇವೆಗಳು ಇಲಾಖೆ	319
15	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	861
16	ವೈದ್ಯಕೀಯ ಶಿಕ್ಷಣ ಇಲಾಖೆ	20951
17	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	3257
18	ವಾರ್ತಾ ಮತ್ತು ಪ್ರಚಾರ ಇಲಾಖೆ	60
19	ಸಮಾಜ ಕಲ್ಯಾಣ ಇಲಾಖೆ	11878
20	ಕಾರ್ಮಿಕ ಮತ್ತು ಉದ್ಯೋಗ ಇಲಾಖೆ	2365

21	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	2152
22	ಕೃಷಿ ಮತ್ತು ತೋಟಗಾರಿಕೆ ಇಲಾಖೆ	7602
23	ಪಶುಸಂಗೋಪನೆ ಇಲಾಖೆ	6003
24	ಮೀನುಗಾರಿಕೆ ಇಲಾಖೆ	499
25	ಅರಣ್ಯ ಇಲಾಖೆ	2828
26	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ	325
27	ಸಹಕಾರ ಇಲಾಖೆ	1399
28	ಭಾರಿ ನೀರಾವರಿ ಇಲಾಖೆ	717
29	ಸಣ್ಣ ನೀರಾವರಿ ಇಲಾಖೆ	498
30	ಕೈಗಾರಿಕೆ ಇಲಾಖೆ	1064
31	ಪ್ರವಾಸೋದ್ಯಮ ಇಲಾಖೆ	49
32	ಇತರೆ	17578
	ಒಟ್ಟು	**157083**

215 ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನ ಬಜೆಟ್‌ನಲ್ಲಿ (Plan & Non-Plan) ನಿಗದಿಪಡಿಸಿರುವ ಇಲಾಖಾವಾರು ಹಣವೆಷ್ಟು?

ಆ) 30.11.2009ರ ವರೆಗೆ ಬಿಡುಗಡೆಗೊಳಿಸಿರುವ ಹಣವೆಷ್ಟು ಹಾಗೂ ಖರ್ಚು ಮಾಡಿರುವ ಹಣವೆಷ್ಟು; (ಇಲಾಖಾರು ವಿವರ ನೀಡುವುದು);

ಇ) ಉಳಿದ ಹಣವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು ಹಾಗೂ ಕಾಲಮಿತಿಯೊಳಗೆ ಈ ಹಣವನ್ನು ಖರ್ಚು ಮಾಡಲಾಗುವುದೇ?